ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 244-251
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮುನ್‌ಷಿ ಪ್ರೇಮಚಂದರ – ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆ

**ಡಾ. ನಾಗರಾಜ ಡಿ. ಮುರಗೋಡ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜಿ. ಪಿ. ಪೋರವಾಲ ಕಲಾ, ವಾಣಿಜ್ಯ ಮತ್ತು ವ್ಹಿ. ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

**Abstract:**

*ಈ ಲೇಖನವು ಪ್ರಸಿದ್ಧ ಭಾರತೀಯ ಸಾಹಿತಿ ಮುನ್‌ಷಿ ಪ್ರೇಮಚಂದ್ ಅವರ ಸಾಹಿತ್ಯಿಕ ಪಯಣ ಮತ್ತು ಅವರ ಕೃತಿಗಳಲ್ಲಿನ ಸಾಮಾಜಿಕ ಚಿಂತನೆಗಳನ್ನು ವಿವರವಾಗಿ ವಿಶ್ಲೇಷಿಸುತ್ತದೆ. ಕಲ್ಪನೆ ಮತ್ತು ರೋಮಾಂಚನಕ್ಕೆ ಸೀಮಿತವಾಗಿದ್ದ ಅಂದಿನ ಸಾಹಿತ್ಯಿಕ ಪ್ರವೃತ್ತಿಯಿಂದ ಹೊರಬಂದು, ಸಾಹಿತ್ಯವನ್ನು ಸಮಾಜ ಸುಧಾರಣೆಯ ಶಕ್ತಿಯುತ ಆಯುಧವಾಗಿ ಬಳಸಿದ ಪ್ರೇಮಚಂದ್ ಅವರ ವೈಶಿಷ್ಟ್ಯವನ್ನು ಇದು ಪರಿಚಯಿಸುತ್ತದೆ. ಲೇಖಕರ ಆರಂಭಿಕ ಜೀವನದ ಕಷ್ಟಗಳು, 'ನವಾಬ್ ರೈ' ಹೆಸರಿನಿಂದ 'ಪ್ರೇಮಚಂದ್' ಆಗಿ ಬದಲಾದ ಬಗೆ ಮತ್ತು ಬ್ರಿಟಿಷ್ ವಿರೋಧಿ ಬರವಣಿಗೆಗಾಗಿ ಅವರು ಎದುರಿಸಿದ ಸವಾಲುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಮುಖ್ಯವಾಗಿ, ಪ್ರೇಮಚಂದ್ ಅವರ ಪ್ರಸಿದ್ಧ ಸಣ್ಣ ಕಥೆಗಳಾದ 'ಕಫನ್', 'ಪೂಸ್ ಕೀ ರಾತ್', 'ಈದ್ಗಾ' ಮತ್ತು 'ಠಾಕೂರ್ ಕಾ ಕುವಾಂ' ಮೂಲಕ ಸಮಾಜದ ದಾರಿದ್ರ್ಯ, ರೈತರ ಅಸಹಾಯಕತೆ ಹಾಗೂ ಜಾತಿ ವ್ಯವಸ್ಥೆಯ ಕ್ರೂರತೆಯನ್ನು ಲೇಖನವು ಅನಾವರಣಗೊಳಿಸುತ್ತದೆ. ಇದರೊಂದಿಗೆ, ಭಾರತೀಯ ಗ್ರಾಮೀಣ ಬದುಕಿನ ದರ್ಪಣದಂತಿರುವ 'ಗೋದಾನ್', ವರದಕ್ಷಿಣೆ ಮತ್ತು ಬಾಲ್ಯವಿವಾಹದ ದುಷ್ಪರಿಣಾಮಗಳನ್ನು ಬಿಂಬಿಸುವ 'ನಿರ್ಮಲಾ', ಮಧ್ಯಮ ವರ್ಗದ ನೈತಿಕ ಸಂಕಟಗಳನ್ನು ತೋರ್ಪಡಿಸುವ 'ಗಬನ್' ಹಾಗೂ ಸ್ವಾತಂತ್ರ್ಯ ಚಳವಳಿ ಮತ್ತು ರಾಷ್ಟ್ರೀಯ ಚೇತನವನ್ನು ಮೂಡಿಸುವ 'ಕರ್ಮಭೂಮಿ' ಕಾದಂಬರಿಗಳ ಆಳವಾದ ವಿಶ್ಲೇಷಣೆ ಇಲ್ಲಿದೆ. ಒಟ್ಟಾರೆಯಾಗಿ, ಪ್ರೇಮಚಂದ್ ಅವರ ಜನಸಾಮಾನ್ಯರ ಭಾಷೆ, ಗಾಂಧೀಜಿ ಅವರ ವಿಚಾರಧಾರೆಗಳ ಪ್ರಭಾವ ಮತ್ತು ಶೋಷಿತರ ಪರವಾದ ಅವರ ಧ್ವನಿ ಇಂದಿನ ಸಮಾಜಕ್ಕೂ ಹೇಗೆ ಪ್ರಸ್ತುತವಾಗಿದೆ ಎಂಬುದನ್ನು ಈ ಲೇಖನವು ಸ್ಪಷ್ಟಪಡಿಸುತ್ತದೆ.*

**Keywords:** *ಪ್ರೇಮಚಂದ್, ಸಾಮಾಜಿಕ ಚಿಂತನೆ, ಸಾಮಾಜಿಕ ನ್ಯಾಯ, ಸಮಾಜ ಸುಧಾರಣೆ, ಶೋಷಿತರ ಧ್ವನಿ, ಗೋದಾನ್, ನಿರ್ಮಲಾ, ಗಬನ್, ಗ್ರಾಮೀಣ ಭಾರತ.*

## ಪೀಠಿಕೆ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕೆಲವು ಲೇಖಕರು ತಮ್ಮ ಕೃತಿಗಳ ಮೂಲಕ ಸಮಾಜವನ್ನು ಮಾತನಾಡಿಸುತ್ತಾರೆ. ಅಂತಹ ಮಹಾನ್ ಲೇಖಕರಲ್ಲಿ ಮುನ್‌ಷಿ ಪ್ರೇಮಚಂದ ಪ್ರಮುಖರು. ಇವರು ಹಿಂದಿ ಮತ್ತು ಉರ್ದು ಸಾಹಿತ್ಯದಲ್ಲಿ ಪ್ರಮುಖ ಬರಹಗಾರರು. ಇವರು ಕೇವಲ ಕಥೆಗಾರ ಅಥವಾ ಕಾದಂಬರಿಕಾರ ಮಾತ್ರವಲ್ಲ; ಅವರು ಶೋಷಿತ, ದಮನಿತ ಮತ್ತು ಸಾಮಾನ್ಯ ಜನರ ಧ್ವನಿ. ಅವರ

***Please cite this article as:*** ನಾಗರಾಜ ಡಿ. ಮುರಗೋಡ. (2025). ಮುನ್‌ಷಿ ಪ್ರೇಮಚಂದರ – ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(3), 244–251

ಸಾಹಿತ್ಯವು ರೈತರು, ಕಾರ್ಮಿಕರು, ಮಹಿಳೆಯರು ಮತ್ತು ಬಡವರ ಜೀವನದ ನೈಜ ಚಿತ್ರಣವನ್ನು ನೀಡುತ್ತದೆ. ಸಾಮಾಜಿಕ ಅನ್ಯಾಯಗಳ ವಿರುದ್ಧ ಅವರ ಲೇಖನಿಯು ಮೌನವಾಗಿ ಮಾತನಾಡುತ್ತದೆ.

ಮುನ್ಷಿ ಪ್ರೇಮಚಂದರ ನಿಜ ಹೆಸರು ಧನಪತ್ ರೈ ಶ್ರೀವಾಸ್ತವ. ಅವರು 1880ರ ಜುಲೈ 31 ರಂದು ಉತ್ತರ ಪ್ರದೇಶದ ವಾರಣಾಸಿ ಜಿಲ್ಲೆಯ ಲಮಹಿ ಎಂಬ ಗ್ರಾಮದಲ್ಲಿ ಜನಿಸಿದರು. ಅವರ ಕುಟುಂಬ ಆರ್ಥಿಕವಾಗಿ ಹಿಂದುಳಿದಿತ್ತು. ಬಾಲ್ಯದಲ್ಲಿಯೇ ಅವರು ತಾಯಿಯನ್ನು ಕಳೆದುಕೊಂಡರು. ತಂದೆ ಅಂಚೆ ಇಲಾಖೆಯಲ್ಲಿ ಸಣ್ಣ ಉದ್ಯೋಗದಲ್ಲಿ ಇದ್ದುದರಿಂದ ಕುಟುಂಬ ಜೀವನ ಕಷ್ಟಕರವಾಗಿತ್ತು. ಹೀಗಾಗಿ ಬಾಲ್ಯದಲ್ಲಿಯೇ ಬಡತನದ ಕಹಿ ಅನುಭವಗಳು ಅವರ ಜೀವನವನ್ನು ರೂಪಿಸಿದವು. ವಿದ್ಯಾಭ್ಯಾಸದ ಜೊತೆಗೆ ಜೀವನ ಸಾಗಿಸಲು ಅವರು ಹಲವು ಕಷ್ಟಗಳನ್ನು ಅನುಭವಿಸಿದರು. ಶಿಕ್ಷಕರಾಗಿ ಕೆಲಸ ಮಾಡುತ್ತಾ ಸಾಹಿತ್ಯದ ಕಡೆ ಆಸಕ್ತಿ ಬೆಳೆಸಿಕೊಂಡರು. ಆರಂಭದಲ್ಲಿ ಉರ್ದು ಭಾಷೆಯಲ್ಲಿ 'ನವಾಬ್ ರೈ' ಎಂಬ ಹೆಸರಿನಿಂದ ಸಾಹಿತ್ಯ ರಚಿಸುತ್ತಿದ್ದ ಅವರು, ನಂತರ 'ಪ್ರೇಮಚಂದ' ಎಂಬ ನಾಮಧೇಯವನ್ನು ಸ್ವೀಕರಿಸಿದರು. ಅವರ ಬ್ರಿಟಿಷ್ ಆಡಳಿತದ ವಿರುದ್ಧವಾದ ಲೇಖನಗಳು ಸರ್ಕಾರದ ಕೋಪಕ್ಕೆ ಗುರಿಯಾದವು. ಅವರ ಕೃತಿ 'ಸೋಜ್–ಎ–ವತನ' ನಿಷೇಧಿಸಲ್ಪಟ್ಟಿತು. ಇದರಿಂದ ಅವರು ಸರ್ಕಾರಿ ಉದ್ಯೋಗವನ್ನು ತ್ಯಜಿಸಿ ಸಂಪೂರ್ಣವಾಗಿ ಸಾಹಿತ್ಯ ಸೇವೆಗೆ ತಮ್ಮ ಜೀವನವನ್ನು ಸಮರ್ಪಿಸಿಕೊಂಡರು.

ಪ್ರೇಮಚಂದರು ತಮ್ಮ ಕಾಲದ ಸಾಹಿತ್ಯ ಪ್ರವೃತ್ತಿಗಳಿಂದ ಭಿನ್ನವಾದ ದಾರಿಯನ್ನು ಹಿಡಿದರು. ಆ ಕಾಲದಲ್ಲಿ ಸಾಹಿತ್ಯದಲ್ಲಿ ಕಲ್ಪನೆ ಮತ್ತು ರೋಮ್ಯಾಂಟಿಕ್ ಭಾವನೆಗಳು ಹೆಚ್ಚು ಇದ್ದವು. ಆದರೆ ಪ್ರೇಮಚಂದರು ಸಾಹಿತ್ಯವು ಸಮಾಜದ ನೈಜ ಸಮಸ್ಯೆಗಳನ್ನು ಪ್ರತಿಬಿಂಬಿಸಬೇಕು ಎಂದು ನಂಬಿದರು. ಅವರ ದೃಷ್ಟಿಯಲ್ಲಿ ಸಾಹಿತ್ಯವು ಕೇವಲ ಮನರಂಜನೆಯ ಸಾಧನವಲ್ಲ, ಅದು ಸಮಾಜ ಸುಧಾರಣೆಯ ಶಕ್ತಿಶಾಲಿ ಆಯುಧವಾಗಬೇಕು ಎಂದು ಬಯಸಿದರು. ಅವರು ಮುಖ್ಯವಾಗಿ ಕಥೆಗಳು, ಕಾದಂಬರಿಗಳು, ನಾಟಕಗಳು, ಪ್ರಬಂಧಗಳು ಹಾಗೂ ಪತ್ರಿಕಾ ಲೇಖನಗಳನ್ನು ರಚಿಸಿದರೂ ಅವರ ಖ್ಯಾತಿಗೆ ಮುಖ್ಯ ಕಾರಣವಾದದ್ದು ಕಥಾಸಾಹಿತ್ಯ ಮತ್ತು ಕಾದಂಬರಿಗಳು. ಪ್ರೇಮಚಂದರ ಕಥೆಗಳು ಭಾರತೀಯ ಕಥಾಸಾಹಿತ್ಯಕ್ಕೆ ಹೊಸ ದಿಕ್ಕು ನೀಡಿದವು. ಅವರ ಕಥೆಗಳ ನಾಯಕರು ರಾಜರು ಅಥವಾ ವೀರರು ಅಲ್ಲ ; ಸಾಮಾನ್ಯ ಜನರು. ಈ ಜನರ ಮೂಲಕ ಸಮಾಜದ ನೈಜ ಸ್ಥಿತಿಯನ್ನು ಅವರು ಅನಾವರಣಗೊಳಿಸಿದರು.

ಅವರ ಪ್ರಮುಖ ಕಥೆಗಳಲ್ಲಿ 'ಕಫನ್' ಒಂದು. ಈ ಕಥೆ ದಾರಿದ್ರ್ಯದ ಭೀಕರ ಪರಿಣಾಮವನ್ನು ತೋರಿಸುತ್ತದೆ. ಗಿಸು ಮತ್ತು ಮಾಧವ ಎಂಬ ತಂದೆ–ಮಗನ ಪಾತ್ರಗಳ ಮೂಲಕ ಬಡತನ ಹೇಗೆ ಮಾನವೀಯ ಮೌಲ್ಯಗಳನ್ನು ಕುಗ್ಗಿಸುತ್ತದೆ ಎಂಬುದನ್ನು ಪ್ರೇಮಚಂದರು ಇಲ್ಲಿ ಚಿತ್ರಿಸಿದ್ದಾರೆ. 'ಪೂಸ್ ಕಿ ರಾತ್' ಅವರ ಇನ್ನೊಂದು ಪ್ರಮುಖ ಕಥೆ. ಈ ಕಥೆಯಲ್ಲಿ ರೈತನೊಬ್ಬನು ತೀವ್ರ ಚಳಿಯ ರಾತ್ರಿಯಲ್ಲಿ ತನ್ನ ಬೆಳೆ ಕಾಪಾಡಲು ಅಸಹಾಯಕನಾಗುವ ದೃಶ್ಯ ಹೃದಯವಿದ್ರಾವಕವಾಗಿದೆ. ರೈತರ ದುಃಖ ಮತ್ತು ಪ್ರಕೃತಿಯ ಮುಂದೆ ಮಾನವನ ಅಸಹಾಯಕತೆ ಇಲ್ಲಿ ಸ್ಪಷ್ಟವಾಗಿ ಗೋಚರಿಸಿದೆ. 'ಈದ್ಗಾ' ಎಂಬ ಅವರ ಕಥೆಯಲ್ಲಿ ಹಮೀದ್ ಎಂಬ ಬಡ ಬಾಲಕನ ತ್ಯಾಗ ಮತ್ತು ಪ್ರೀತಿಯ ಕಥೆ ಇದೆ. ಈ ಕಥೆ ಮಾನವೀಯತೆ, ಕುಟುಂಬ ಪ್ರೀತಿ ಮತ್ತು ತ್ಯಾಗದ ಮೌಲ್ಯಗಳನ್ನು ಅತ್ಯಂತ ಸರಳವಾಗಿ ಅಷ್ಟೇ ಗಾಢವಾಗಿ ತಿಳಿಸುತ್ತದೆ. ಅವರ 'ಠಾಕೂರ್ ಕಾ ಕುವಾಂ' ಕಥೆಯು ಜಾತಿ ವ್ಯವಸ್ಥೆಯ ಕ್ರೂರತೆಯನ್ನು ಬಹಿರಂಗಪಡಿಸುತ್ತದೆ. ಕೆಳಜಾತಿಯವರಿಗೆ ನೀರಿನ ಹಕ್ಕು ಕೂಡ ಇಲ್ಲದ ಸಮಾಜದ ಅನ್ಯಾಯವನ್ನು ಇಲ್ಲಿ ಪ್ರೇಮಚಂದರು ಚಿತ್ರಿಸಿದ್ದಾರೆ.

ಪ್ರೇಮಚಂದರ ಕಥೆಗಳಂತೆ ಅವರ ಕಾದಂಬರಿಗಳು ಭಾರತೀಯ ಸಮಾಜದ ವಿಶಾಲ ಚಿತ್ರಣವನ್ನು ನೀಡುತ್ತವೆ. ಅವರ ಕಾದಂಬರಿಗಳು ಕೇವಲ ಮಾತನಾಡುವ ಕಾಲ್ಪನಿಕ ಪಾತ್ರಗಳಲ್ಲ, ಅವು ಸಾಮಾಜಿಕ ಒಡಂಬಡಿಕೆಗಳಾಗಿವೆ. ಕಥೆಯಷ್ಟೇ ಅಲ್ಲ, ಸಾಮಾಜಿಕ ದಾಖಲೆಗಳಾಗಿವೆ. ಅವರ 'ಗೋದಾನ್' ಎಂಬ ಕಾದಂಬರಿಯು ಭಾರತೀಯ ಸಾಹಿತ್ಯದ ಅತ್ಯಂತ ಮಹತ್ವದ ಸಾಮಾಜಿಕ ಕಾದಂಬರಿಗಳಲ್ಲಿ ಒಂದಾಗಿದೆ. 1936ರಲ್ಲಿ ಪ್ರಕಟವಾದ ಈ ಕೃತಿ, ಭಾರತದ ಗ್ರಾಮೀಣ ಸಮಾಜದ ನೈಜ ಸ್ಥಿತಿ, ರೈತರ ದುಃಖ–ಸಂಕಷ್ಟಗಳು, ಸಾಮಾಜಿಕ ಅಸಮಾನತೆ ಮತ್ತು ಮಾನವೀಯ ಮೌಲ್ಯಗಳ ಕುಸಿತವನ್ನು ಅತ್ಯಂತ ವಾಸ್ತವಿಕವಾಗಿ ಚಿತ್ರಿಸುತ್ತದೆ. "ಗೋದಾನ" ಕೇವಲ ಕಥೆಯಲ್ಲ; ಅದು ಭಾರತದ ಗ್ರಾಮೀಣ ಜೀವನದ ದರ್ಪಣವಾಗಿದೆ. ಈ ಕಾದಂಬರಿಯಲ್ಲಿ ಗ್ರಾಮೀಣ ಭಾರತದ ರೈತರ ಜೀವನ, ಸಾಲದ ಹೊರೆ, ಜಮೀನುದಾರರ ಶೋಷಣೆ, ಧಾರ್ಮಿಕ ಸಂಪ್ರದಾಯಗಳು, ಜಾತಿ–ವರ್ಗ ಭೇದ ಮತ್ತು ನಗರ–ಗ್ರಾಮ ನಡುವಿನ ವ್ಯತ್ಯಾಸಗಳನ್ನು ಬಹಳ ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಇದು ಕೇವಲ ಒಂದು ಕುಟುಂಬದ ಕಥೆಯಲ್ಲ; ಒಂದು ಕಾಲಘಟ್ಟದ ಸಾಮಾಜಿಕ ಚಿಂತನೆಯಾಗಿದೆ.

ಈ ಕಾದಂಬರಿಯ ಕೇಂದ್ರ ಪಾತ್ರ ಹೋರಿ. ಅವನು ಬಡ ರೈತ. ತನ್ನ ಕುಟುಂಬದೊಂದಿಗೆ ಸಣ್ಣ ಜಮೀನಿನಲ್ಲಿ ಕೃಷಿ ಮಾಡುತ್ತಾ ಬದುಕುವ ಹೋರಿಯ ಕನಸು – ಒಂದು ಗೋವನ್ನು ಹೊಂದುವುದಾಗಿತ್ತು. ಹೋರಿ ಜೀವನಪೂರ್ತಿ ಕಷ್ಟಪಡುತ್ತಾನೆ. ಸಾಲ, ಬಡತನ, ಜಮೀನುದಾರರ ಶೋಷಣೆ, ಸಮಾಜದ ಒತ್ತಡ – ಇವೆಲ್ಲವೂ ಅವನನ್ನು ನಿರಂತರವಾಗಿ ಕಾಡುತ್ತವೆ. ಅವನ ಪತ್ನಿ ಧನಿಯಾ ಧೈರ್ಯಶಾಲಿ ಮತ್ತು ವಾಸ್ತವಿಕ ಮನಸ್ಥಿತಿಯ ಮಹಿಳೆ. ಅವಳು ಕುಟುಂಬವನ್ನು ಕಾಪಾಡಲು ಪ್ರಯತ್ನಿಸುತ್ತಿರುತ್ತಾಳೆ. ಹೋರಿಯ ಮಗ ಗೋಬರ್ ಮತ್ತು ಇತರ ಕುಟುಂಬ ಸದಸ್ಯರ ಬದುಕು ಕೂಡ ಸಮಾಜದ ಅನ್ಯಾಯಗಳ ನಡುವೆ ಸಾಗುತ್ತದೆ. ಒಂದು ಸಣ್ಣ ಕನಸನ್ನು ಸಾಕಾರಗೊಳಿಸಲು ಹೋರಾಡುವ ಕುಟುಂಬದ ದುಃಖಮಯ ಕಥೆಯೇ "ಗೋದಾನ". ಕಥೆಯ ಅಂತ್ಯದಲ್ಲಿ, ಹೋರಿ ತನ್ನ ಜೀವನಪೂರ್ತಿ ಬಯಸಿದ "ಗೋದಾನ" ನೆರವೇರಿಸುವ ಆಸೆ ಹೊಂದಿದ್ದರೂ, ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟಗಳ ಕಾರಣದಿಂದ ಅದು ಸಂಪೂರ್ಣವಾಗಿ ನೆರವೇರದು. ಅವನ ಮರಣದ ಕ್ಷಣಗಳು ಜೀವನದ ಅರ್ಥವನ್ನು ಓದುಗರ ಮುಂದೆ ತೆರೆದಿಡುತ್ತವೆ. "ಗೋದಾನ" ಕೇವಲ ಒಂದು ಕಾದಂಬರಿಯ ಕಥೆ ಅಲ್ಲ; ಅದು ಭಾರತದ ಗ್ರಾಮೀಣ ಬದುಕಿನ ಇತಿಹಾಸ.

ಭಾರತೀಯ ಸಾಹಿತ್ಯದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ ಅವರ ಪ್ರಮುಖ ಕೃತಿಗಳಲ್ಲಿ 'ನಿರ್ಮಲಾ' ಕಾದಂಬರಿ ಒಂದು ಮಹತ್ವದ ಸ್ಥಾನವನ್ನು ಹೊಂದಿದೆ. ಈ ಕಾದಂಬರಿ ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಿತಿ, ದಾರಿದ್ರ್ಯ, ದಾಂಪತ್ಯ ಜೀವನದ ಸಂಕೀರ್ಣತೆ ಮತ್ತು ಸಂಪ್ರದಾಯಗಳ ಪರಿಣಾಮವನ್ನು ವಾಸ್ತವಿಕವಾಗಿ ಚಿತ್ರಿಸುತ್ತದೆ. ನಿರ್ಮಲಾ ಕೇವಲ ಒಂದು ಕಾದಂಬರಿ ಮಾತ್ರವಲ್ಲ; ಅದು ಸಮಾಜದ ನೋವು, ಅಸಮಾನತೆ ಮತ್ತು ಅನ್ಯಾಯಗಳ ಪ್ರತಿಬಿಂಬವಾಗಿದೆ.

'ನಿರ್ಮಲಾ' 20ನೇ ಶತಮಾನದ ಆರಂಭದ ಭಾರತೀಯ ಸಮಾಜವನ್ನು ಆದರಿಸಿ ರಚಿತಗೊಂಡ ಕಾದಂಬರಿಯಾಗಿದೆ. ಆ ಕಾಲದಲ್ಲಿ ಬಾಲ್ಯವಿವಾಹ, ವರದಕ್ಷಿಣಾ ಪದ್ಧತಿ, ಮಹಿಳೆಯರ ಶಿಕ್ಷಣದ ಕೊರತೆ ಹಾಗೂ ಕುಟುಂಬದ ಒತ್ತಡಗಳು ಸಾಮಾನ್ಯವಾಗಿದ್ದವು. ಈ ಹಿನ್ನೆಲೆಯಲ್ಲಿಯೇ 'ನಿರ್ಮಲಾ' ಎಂಬ ಯುವತಿಯ ಜೀವನದ ಮೂಲಕ ಸಮಾಜದ ಅನ್ಯಾಯವನ್ನು ಇಲ್ಲಿ ಲೇಖಕರು ಅನಾವರಣಗೊಳಿಸಿದ್ದಾರೆ.

ನಿರ್ಮಲಾ ಸುಂದರ, ಸೌಮ್ಯ ಮತ್ತು ಶಿಷ್ಟ ಗುಣಗಳನ್ನು ಹೊಂದಿರುವ ಯುವತಿ. ಅವಳ ತಂದೆ

ಮಧ್ಯಮ ವರ್ಗದ ವ್ಯಕ್ತಿ. ಅವಳ ವಿವಾಹಕ್ಕಾಗಿ ಅವರು ಉತ್ತಮ ವರನನ್ನು ಹುಡುಕುತ್ತಾರೆ. ಆದರೆ ಅವರ ಆರ್ಥಿಕ ಸ್ಥಿತಿ ದುರ್ಬಲವಾಗಿದ್ದರಿಂದ ವರದಕ್ಷಿಣಾ ಪದ್ಧತಿಯ ಕಾರಣದಿಂದಾಗಿ ನಿರ್ಮಲಾಳನ್ನು ವಯಸ್ಸಾದ ವ್ಯಕ್ತಿಯಾದ ಟೋಟಾರಾಮ್ ಜೊತೆ ವಿವಾಹ ಮಾಡಲಾಗುತ್ತದೆ. ಟೋಟಾರಾಮ್ ವಿಧುರನಾಗಿದ್ದು, ಅವನಿಗೆ ಮುಂಚೆಯೇ ಮಕ್ಕಳು ಇರುತ್ತಾರೆ. ನಿರ್ಮಲಾ ಮತ್ತು ಪತಿಯ ವಯಸ್ಸಿನ ವ್ಯತ್ಯಾಸ, ಹೊಸ ಮನೆಯ ಪರಿಸ್ಥಿತಿ ಹಾಗೂ ಸಮಾಜದ ನಿರೀಕ್ಷೆಗಳು – ಇವೆಲ್ಲವೂ ಅವಳ ಜೀವನವನ್ನು ಸಂಕೀರ್ಣಗೊಳಿಸುತ್ತವೆ. ಟೋಟಾರಾಮ್ ತನ್ನ ಹೆಂಡತಿಯ ಯೌವನವನ್ನು ಗಮನಿಸಿ, ಅವಳ ಮತ್ತು ತನ್ನ ಮಗನ ನಡುವೆ ಅನಾವಶ್ಯಕ ಅನುಮಾನವನ್ನು ಹೊಂದಲು ಪ್ರಾರಂಭಿಸುತ್ತಾನೆ. ಈ ಅನುಮಾನ ಕುಟುಂಬದ ವಾತಾವರಣವನ್ನು ವಿಷಮಗೊಳಿಸುತ್ತದೆ. ಮಗನ ಮೇಲಿನ ಈ ಅನುಮಾನದಿಂದಾಗಿ ಟೋಟಾರಾಮ್ ಅವನನ್ನು ದೂರ ಕಳುಹಿಸುತ್ತಾನೆ. ಆಗ ಆ ಮಗನ ಮನಸ್ಥಿತಿ ಕುಗ್ಗಿ, ಕೊನೆಗೆ ಅವನ ಆರೋಗ್ಯ ಹದಗೆಡುತ್ತದೆ. ಮನೆಯೊಳಗಿನ ಅನುಮಾನ, ನೋವು ಮತ್ತು ಒತ್ತಡಗಳು ನಿರ್ಮಲಾಳ ಮನಸ್ಸನ್ನು ಕಾಡುತ್ತವೆ. ಕೊನೆಗೆ ಕುಟುಂಬದ ಸಂಬಂಧಗಳು ಕುಸಿದು ಹೋಗುವುದರ ಜೊತೆಗೆ ದುಃಖಕರ ಘಟನೆಗಳು ಒಂದರ ಹಿಂದೆ ಒಂದಾಗಿ ಜರುಗತೊಡಗುತ್ತವೆ. ಯುವತಿಯರನ್ನು ಚಿಕ್ಕ ವಯಸ್ಸಿನಲ್ಲಿ ವಿವಾಹ ಮಾಡುವ ಸಂಪ್ರದಾಯಗಳು ಅವರ ಜೀವನದ ಸ್ವಾತಂತ್ರ್ಯವನ್ನೇ ಕಸಿದುಕೊಳ್ಳುತ್ತವೆ ಎಂಬುದು ಇಲ್ಲಿ ನಿರ್ಮಲಾಳ ಜೀವನದ ಮುಖಾಂತರ ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಆಗ ಮಹಿಳೆಯರಿಗೆ ತಮ್ಮ ಜೀವನದ ನಿರ್ಧಾರಗಳನ್ನು ತೆಗೆದುಕೊಳ್ಳುವ ಅವಕಾಶ ಇರಲಿಲ್ಲ. ಕುಟುಂಬದ ಒತ್ತಡ ಮತ್ತು ಸಮಾಜದ ನಿಯಮಗಳು ಅವರ ಬದುಕನ್ನು ನಿಯಂತ್ರಿಸುತ್ತಿದ್ದವು. ಇಲ್ಲಿ ಪ್ರೇಮಚಂದ ಅವರ ಸಾಹಿತ್ಯ ಶೈಲಿ ಸರಳ ಮತ್ತು ಸ್ಪಷ್ಟವಾಗಿದೆ. ಅವರು ಅತಿರಂಜಿತ ಭಾಷೆಯನ್ನು ಬಳಸದೆ, ನೈಸರ್ಗಿಕ ಮತ್ತು ವಾಸ್ತವಿಕ ಘಟನೆಗಳನ್ನು ಚಿತ್ರಿಸುತ್ತಾರೆ. ಸಂಭಾಷಣೆಗಳು ಸಹಜವಾಗಿದ್ದು, ಪಾತ್ರಗಳ ಮನೋಭಾವಗಳನ್ನು ಸ್ಪಷ್ಟವಾಗಿ ತೋರಿಸುತ್ತಾರೆ. ಕಾದಂಬರಿಯಲ್ಲಿ ಮನೋವೈಜ್ಞಾನಿಕ ಚಿತ್ರಣವೂ ಮಹತ್ವದ್ದಾಗಿ ಮೂಡಿಬಂದಿದೆ. ಪ್ರತಿಯೊಂದು ಪಾತ್ರದ ಒಳಮನಸ್ಸಿನ ಸಂಕಷ್ಟವನ್ನು ಲೇಖಕರು ಸೂಕ್ಷ್ಮವಾಗಿ ಬಿಂಬಿಸಿದ್ದಾರೆ. ವಿಶೇಷವಾಗಿ ನಿರ್ಮಲಾಳ ಮೌನವೇ ಅವಳ ನೋವನ್ನು ವ್ಯಕ್ತಪಡಿಸುವ ಒಂದು ಪ್ರಮುಖ ಮಾನದಂಡವಾಗಿದೆ.

ಮಹಿಳೆಯರ ಶಿಕ್ಷಣ, ಸ್ವಾವಲಂಬನೆ ಮತ್ತು ಸಮಾನ ಹಕ್ಕುಗಳ ಮಹತ್ವವನ್ನು ಈ ಕೃತಿ ಸ್ಪಷ್ಟವಾಗಿ ತಿಳಿಸುತ್ತದೆ. ಕುಟುಂಬದಲ್ಲಿ ಪರಸ್ಪರ ನಂಬಿಕೆ ಮತ್ತು ಗೌರವ ಇಲ್ಲದಿದ್ದರೆ, ಸಂಬಂಧಗಳು ಕುಸಿದು ಹೋಗುತ್ತವೆ ಎಂಬುದನ್ನು ಕಾದಂಬರಿ ತೋರಿಸುತ್ತದೆ. ಒಟ್ಟಿನಲ್ಲಿ, 'ನಿರ್ಮಲಾ' ಕಾದಂಬರಿ ಭಾರತೀಯ ಸಮಾಜದ ವಾಸ್ತವಿಕ ಚಿತ್ರಣವಾಗಿದೆ. ಮಹಿಳೆಯರ ನೋವು, ಕುಟುಂಬದ ಸಂಕಷ್ಟಗಳು ಮತ್ತು ಸಾಮಾಜಿಕ ಅನ್ಯಾಯಗಳನ್ನು ಲೇಖಕರು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಇದು ಕೇವಲ ಒಂದು ಸಾಹಿತ್ಯ ಕೃತಿ ಮಾತ್ರವಲ್ಲ; ಸಮಾಜಕ್ಕೆ ದಾರಿ ತೋರಿಸುವ ಚಿಂತನೆಗಳ ಸಂಕಲನವಾಗಿದೆ. ಪ್ರೇಮಚಂದ ಅವರ ಈ ಕೃತಿ ಇಂದಿಗೂ ಪ್ರಸ್ತುತವಾಗಿದೆ. ಸಮಾಜದ ಅನ್ಯಾಯಗಳನ್ನು ಅರಿತು, ಉತ್ತಮ ಮೌಲ್ಯಗಳನ್ನು ಬೆಳೆಸಲು ಈ ಕಾದಂಬರಿ ಓದುಗರನ್ನು ಪ್ರೇರೇಪಿಸುತ್ತದೆ. ಮಹಿಳೆಯರ ಗೌರವ, ಸಮಾನತೆ ಮತ್ತು ನಂಬಿಕೆಯ ಮೇಲೆ ಆಧಾರಿತವಾದ ಕುಟುಂಬ ಜೀವನದ ಮಹತ್ವವನ್ನು ಇದು ಸ್ಪಷ್ಟವಾಗಿ ಹೇಳುತ್ತದೆ. ಹೀಗಾಗಿ, 'ನಿರ್ಮಲಾ' ಕಾದಂಬರಿ ಭಾರತೀಯ ಸಾಹಿತ್ಯದಲ್ಲಿ ಸದಾ ಕಾಲ ಉಳಿಯುವ ಅಮೂಲ್ಯ ಕೃತಿಯಾಗಿದೆ.

ಪ್ರೇಮಚಂದರ ಇನ್ನೊಂದು ಪ್ರಸಿದ್ಧ ಕಾದಂಬರಿ 'ಗಬನ್'. ಇದು ಹಿಂದಿ ಸಾಹಿತ್ಯದ ಪ್ರಸಿದ್ಧ ಸಾಮಾಜಿಕ ಕಾದಂಬರಿಗಳಲ್ಲಿ ಒಂದಾಗಿದೆ.

ಮಧ್ಯಮವರ್ಗದ ಜೀವನ, ಹಣದ ಪ್ರಲೋಭನೆ, ಸಾಮಾಜಿಕ ಗೌರವದ ಆಸೆ ಮತ್ತು ನೈತಿಕ ಸಂಕಷ್ಟಗಳನ್ನು ಆಳವಾಗಿ ಚಿತ್ರಿಸುತ್ತದೆ. ಈ ಕಾದಂಬರಿ ಮಾನವನ ಮನಸ್ಸಿನ ದೌರ್ಬಲ್ಯಗಳು ಮತ್ತು ಸಮಾಜದ ಒತ್ತಡಗಳು ಹೇಗೆ ಅಪರಾಧದ ದಾರಿಗೆ ದೂಡುತ್ತವೆ ಎಂಬುದನ್ನು ಅತ್ಯಂತ ವಾಸ್ತವಿಕವಾಗಿ ತೋರಿಸುತ್ತದೆ.

'ಗಬನ್' ಎಂಬ ಪದದ ಅರ್ಥವೇ ಹಣದ ದುರುಪಯೋಗ ಅಥವಾ ಅಕ್ರಮ ಬಳಕೆ. ಕಾದಂಬರಿಯ ಕಥಾವಸ್ತು ಈ ಅರ್ಥದ ಸುತ್ತಲೇ ರೂಪುಗೊಂಡಿದೆ. ಬ್ರಿಟಿಷ್ ಕಾಲಘಟ್ಟದ ಭಾರತದಲ್ಲಿ ಮಧ್ಯಮವರ್ಗದ ಕುಟುಂಬಗಳು ಎದುರಿಸುತ್ತಿದ್ದ ಆರ್ಥಿಕ ಕಷ್ಟಗಳು, ಸಮಾಜದ ಮಾನಪ್ರತಿಷ್ಠೆಯ ಆಸೆ ಮತ್ತು ವ್ಯಕ್ತಿಯ ಒಳಗಿನ ನೈತಿಕ ಹೋರಾಟಗಳನ್ನು ಪ್ರೇಮಚಂದರು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಈ ಕೃತಿಯಲ್ಲಿ ವ್ಯಕ್ತಿಯ ಸ್ವಭಾವ, ಸಮಾಜದ ಪ್ರಭಾವ ಮತ್ತು ಕುಟುಂಬದ ನಿರೀಕ್ಷೆಗಳು ಹೇಗೆ ಒಂದಕ್ಕೊಂದು ಸಂಬಂಧಿಸಿಕೊಂಡಿವೆ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ರಮಾನಾಥ – ಕಾದಂಬರಿಯ ನಾಯಕ. ಮಧ್ಯಮವರ್ಗದ, ಆಸೆಗಳಿರುವ, ಆದರೆ ನೈತಿಕ ಸಂಕಷ್ಟದಲ್ಲಿ ಸಿಲುಕುವ ವ್ಯಕ್ತಿ. ಜಲ್ಪಾ – ರಮಾನಾಥನ ಪತ್ನಿ. ಆಭರಣಗಳು ಮತ್ತು ವೈಭವದ ಜೀವನದ ಮೇಲೆ ಆಸಕ್ತಿ ಹೊಂದಿರುವಳು.

ಕಥೆಯ ಕೇಂದ್ರದಲ್ಲಿ ರಮಾನಾಥ ಮತ್ತು ಜಲ್ಪಾಳ ವೈವಾಹಿಕ ಜೀವನದ ವಿವರಣೆ ಇದೆ. ಜಲ್ಪಾಳಿಗೆ ಬಾಲ್ಯದಿಂದಲೇ ಆಭರಣಗಳ ಮೇಲೆ ಹೆಚ್ಚಿನ ಆಸಕ್ತಿ ಇರುತ್ತದೆ. ಮದುವೆಯಾದ ನಂತರ ತನ್ನ ಪತಿಯು ಆಭರಣಗಳನ್ನು ಕೊಡಬೇಕು ಎಂಬ ನಿರೀಕ್ಷೆ ಇರುತ್ತದೆ. ರಮಾನಾಥನು ತನ್ನ ಪತ್ನಿಯನ್ನು ಸಂತೋಷಪಡಿಸಲು ಪ್ರಯತ್ನಿಸುತ್ತಾನೆ. ಆದರೆ ಅವನ ಆದಾಯ ಕಡಿಮೆ. ಆದರೂ ಸಮಾಜದಲ್ಲಿ ಗೌರವ ಕಾಪಾಡಿಕೊಳ್ಳಬೇಕು, ಪತ್ನಿಯ ಆಸೆಗಳನ್ನು ಪೂರೈಸಬೇಕು ಎಂಬ ಮನೋಭಾವ ಅವನನ್ನು ಹೆಚ್ಚು ಖರ್ಚು ಮಾಡುವಂತೆ ಮಾಡುತ್ತದೆ. ಸಮಾಜದಲ್ಲಿ "ಹಣವಿರುವವನೇ ಗೌರವಾನ್ವಿತ" ಎಂಬ ಕಲ್ಪನೆ ಅವನ ಮೇಲೆ ದೊಡ್ಡ ಪ್ರಭಾವ ಬೀರುತ್ತದೆ. ಇತರರು ಧನಿಕರಾಗಿರುವುದನ್ನು ನೋಡಿ ಅವನಲ್ಲೂ ಆ ರೀತಿಯ ಜೀವನ ನಡೆಸಬೇಕೆಂಬ ಆಸೆ ಹುಟ್ಟುತ್ತದೆ. ಮೊದಲಿಗೆ ಅವನು ಸಣ್ಣ ಪ್ರಮಾಣದಲ್ಲಿ ಸಾಲ ತೆಗೆದುಕೊಳ್ಳುತ್ತಾನೆ. ನಂತರ ತನ್ನ ಸ್ಥಿತಿಯನ್ನು ಮರೆಮಾಚಲು ಸುಳ್ಳು ಹೇಳುತ್ತಾನೆ. ನಿಧಾನವಾಗಿ ಈ ಸುಳ್ಳು ಮತ್ತು ಆರ್ಥಿಕ ಒತ್ತಡ ಅವನನ್ನು ತಪ್ಪು ಮಾರ್ಗಕ್ಕೆ ಒಯ್ಯುತ್ತದೆ. ಒಂದು ಸಂದರ್ಭದಲ್ಲಿ ಅವನು ಕೆಲಸದ ಸಂಬಂಧಿತ ಹಣವನ್ನು ದುರುಪಯೋಗ ಮಾಡುತ್ತಾನೆ. ಇದೇ "ಗಬನ್". ಈ ಘಟನೆ ಅವನ ಜೀವನವನ್ನು ಸಂಪೂರ್ಣವಾಗಿ ಬದಲಿಸುತ್ತದೆ. ಅವನ ಮನಸ್ಸಿನಲ್ಲಿ ಭಯ, ಪಶ್ಚಾತ್ತಾಪ ಮತ್ತು ಆತಂಕ ಹೆಚ್ಚುತ್ತದೆ. ಕಾನೂನಿನ ಭೀತಿ, ಸಮಾಜದಲ್ಲಿ ಅಪಮಾನ ಮತ್ತು ಕುಟುಂಬದ ಭವಿಷ್ಯದ ಬಗ್ಗೆ ಚಿಂತನೆಗಳು ಅವನನ್ನು ಕಂಗೆಡಿಸುತ್ತವೆ. ಪ್ರೇಮಚಂದರು ಇಲ್ಲಿ ವ್ಯಕ್ತಿಯ ಒಳಗಿನ ಹೋರಾಟವನ್ನು ನೈಜವಾಗಿ ಚಿತ್ರಿಸಿದ್ದಾರೆ. ಅಪರಾಧ ಮಾಡಿದ ನಂತರದ ವ್ಯಕ್ತಿಯ ಮಾನಸಿಕ ಒತ್ತಡದ ಚಿತ್ರಣ, ತಪ್ಪು ಮಾಡಿದ ವ್ಯಕ್ತಿ ಸಂಪೂರ್ಣ ದುಷ್ಟನಾಗಿ ಇರುವುದಿಲ್ಲ; ಪರಿಸ್ಥಿತಿಗಳು ಅವನನ್ನು ಹಾಗೆ ಮಾಡಿಸುತ್ತವೆ ಎಂಬ ಸಂದೇಶ ಇಲ್ಲಿ ಸ್ಪಷ್ಟವಾಗಿದೆ.

ಕಾದಂಬರಿಯ ಅತ್ಯಂತ ಮಹತ್ವದ ಭಾಗ ಜಲ್ಪಾಳ ವ್ಯಕ್ತಿತ್ವದ ಬದಲಾವಣೆ. ಆರಂಭದಲ್ಲಿ ಅವಳು ಆಭರಣಗಳಿಗೆ ಹೆಚ್ಚು ಮಹತ್ವ ನೀಡುತ್ತಿದ್ದಳು. ಆದರೆ ಜೀವನದ ಸಂಕಷ್ಟಗಳನ್ನು ಎದುರಿಸಿದ ನಂತರ ಅವಳು ಜೀವನದ ನಿಜವಾದ ಮೌಲ್ಯಗಳನ್ನು ಅರಿಯಲು ಪ್ರಾರಂಭಿಸುತ್ತಾಳೆ. ಆಭರಣಗಳಿಗಿಂತ ಮಾನವೀಯತೆ ಮತ್ತು ಸಂಬಂಧಗಳು ಮುಖ್ಯವೆಂಬುದನ್ನು ಅವಳು ತಿಳಿದುಕೊಳ್ಳುತ್ತಾಳೆ. ನೈತಿಕತೆ, ಪ್ರೀತಿ ಮತ್ತು ಕುಟುಂಬದ ಮಹತ್ವವನ್ನು ಅರಿಯುತ್ತಾಳೆ. ಅವಳ ಪರಿವರ್ತನೆ ಕಾದಂಬರಿಯ

ನೈತಿಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮಹಿಳೆಯೊಬ್ಬಳ ಮನಸ್ಸಿನ ಬೆಳವಣಿಗೆಯನ್ನು ಪ್ರೇಮಚಂದ್ ಸೂಕ್ಷ್ಮವಾಗಿ ಇಲ್ಲಿ ಚಿತ್ರಿಸಿದ್ದಾರೆ.

ಒಟ್ಟಾರೆ 'ಗಬನ್' ಒಂದು ಮಾನವೀಯತೆಯನ್ನು ಸಾರುವ ಕಥೆ. ಇದು ತಪ್ಪು ಮಾಡಿದ ವ್ಯಕ್ತಿಯನ್ನು ಖಂಡಿಸುವುದಕ್ಕಿಂತ, ಅವನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರೇರೇಪಿಸುತ್ತದೆ. ರಮಾನಾಥನ ಜೀವನದ ಮೂಲಕ ಹಣದ ಪ್ರಲೋಭನೆ ಮತ್ತು ಸಮಾಜದ ಒತ್ತಡಗಳು ಮಾನವನನ್ನು ಹೇಗೆ ಬದಲಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಜಲ್ಪಾಳ ಪರಿವರ್ತನೆಯ ಮೂಲಕ ಜೀವನದ ನಿಜವಾದ ಮೌಲ್ಯಗಳು – ಪ್ರೀತಿ, ನೈತಿಕತೆ ಮತ್ತು ಕುಟುಂಬ – ಎಷ್ಟು ಮುಖ್ಯವೆಂಬುದು ಗೊತ್ತಾಗುತ್ತದೆ. ಆದ್ದರಿಂದ 'ಗಬನ್' ಕೇವಲ ಒಂದು ಕಾದಂಬರಿ ಅಲ್ಲ; ಅದು ಮಾನವನ ಜೀವನದ ನೈತಿಕ ಪಾಠವಾಗಿದೆ. ಸಮಾಜದಲ್ಲಿ ನಡೆಯುವ ಅನೇಕ ಸಮಸ್ಯೆಗಳಿಗೆ ಇದು ಪ್ರತಿಬಿಂಬದಂತೆ ಕೆಲಸ ಮಾಡುತ್ತದೆ. ಪ್ರೇಮಚಂದ್ ತಮ್ಮ ವಿಶಿಷ್ಟ ಶೈಲಿಯಲ್ಲಿ ಸಾಮಾನ್ಯ ಜನರ ಕಥೆಯನ್ನು ಅಸಾಮಾನ್ಯವಾಗಿ ಹೇಳಿರುವುದರಿಂದ, ಈ ಕೃತಿ ಇಂದಿಗೂ ಪ್ರಸ್ತುತವಾಗಿದೆ ಮತ್ತು ಓದುಗರನ್ನು ಆಲೋಚನೆಗೆ ಪ್ರೇರೇಪಿಸುತ್ತಿದೆ.

'ಕರ್ಮಭೂಮಿ' ಎಂಬುದು ಅವರ ಮತ್ತೊಂದು ಹಿಂದಿ ಸಾಹಿತ್ಯದ ಪ್ರಮುಖ ಕಾದಂಬರಿ. ಇದು ಸಮಾನತೆ, ರಾಷ್ಟ್ರೀಯ ಚಳವಳಿ, ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಸಶಕ್ತ ಚಿತ್ರಣವನ್ನು ನೀಡುವ ಅನುಪಮ ಕೃತಿಯಾಗಿದೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿಯೇ ಸಮಾಜದ ವಿವಿಧ ಸಮಸ್ಯೆಗಳ ಕುರಿತಾಗಿ ಆಳವಾದ ಚಿಂತನೆಗಳನ್ನು ಒಳಗೊಂಡಿದೆ.

ಕರ್ಮಭೂಮಿ ಎಂಬ ಪದದ ಅರ್ಥ "ಕರ್ಮ ಮಾಡಲು ಇರುವ ಭೂಮಿ" ಅಥವಾ "ಕರ್ತವ್ಯದ ಕ್ಷೇತ್ರ" ಎಂಬುದು. ಈ ಕಾದಂಬರಿಯಲ್ಲಿ ವ್ಯಕ್ತಿಯ ಜೀವನವು ಕೇವಲ ವೈಯಕ್ತಿಕ ಸುಖಸೌಲಭ್ಯಗಳಿಗಾಗಿ ಮಾತ್ರವಲ್ಲ; ಸಮಾಜದ ಅಭಿವೃದ್ಧಿ ಮತ್ತು ನ್ಯಾಯಕ್ಕಾಗಿ ಕಾರ್ಯನಿರ್ವಹಿಸುವ ಕರ್ತವ್ಯಪೂರ್ಣ ಯಾತ್ರೆಯಾಗಿದೆ ಎಂಬ ಸಂದೇಶ ನೀಡಲಾಗಿದೆ. ಈ ಕಾದಂಬರಿ ಭಾರತದ ಸಾಮಾಜಿಕ–ರಾಜಕೀಯ ಪರಿಸ್ಥಿತಿಗಳನ್ನು ಬಿಂಬಿಸುವುದರ ಜೊತೆಗೆ, ಶಿಕ್ಷಣ, ಧರ್ಮ, ವರ್ಣವ್ಯವಸ್ಥೆ, ಬಡತನ, ರೈತರ ಸಂಕಷ್ಟ ಮತ್ತು ಸತ್ಯಾಗ್ರಹದ ಮಹತ್ವವನ್ನು ವಿವರಿಸುತ್ತದೆ.

ಕಥೆಯ ಕೇಂದ್ರದಲ್ಲಿ ಅಮರ್ ಕುಮಾರ್ ಎಂಬ ಯುವಕನ ಜೀವನವಿದೆ. ಅವನು ವಿದ್ಯಾವಂತನಾಗಿದ್ದರೂ ಸಮಾಜದ ಅಸಮಾನತೆ ಮತ್ತು ಅನ್ಯಾಯವನ್ನು ನೋಡಿ ಅಸಮಾಧಾನಗೊಳ್ಳುತ್ತಾನೆ. ಅವನ ತಂದೆ ಸಂಪ್ರದಾಯಪರ ಮನೋಭಾವದವರು; ಸಮಾಜದಲ್ಲಿ ಸ್ಥಿರವಾದ ಜೀವನವೇ ಮುಖ್ಯ ಎಂಬ ನಿಲುವಿನವರಾಗಿದ್ದಾರೆ. ಆದರೆ ಅಮರ್ ಸಮಾಜಸೇವೆಯತ್ತ ಆಕರ್ಷಿತನಾಗುತ್ತಾನೆ. ಅಮರ್ ತನ್ನ ಜೀವನದಲ್ಲಿ ಸತ್ಯ ಮತ್ತು ಧರ್ಮವನ್ನು ಮುಖ್ಯವಾಗಿ ಪರಿಗಣಿಸುತ್ತಾನೆ. ಅವನು ಸಮಾಜದಲ್ಲಿ ಬಡವರ ಸಂಕಷ್ಟಗಳನ್ನು ನೋಡುತ್ತಾನೆ. ರೈತರು ಸಾಲದ ಭಾರದಿಂದ ನರಳುತ್ತಿರುವುದು, ಜಾತಿ–ವರ್ಗ ಭೇದಗಳು ಜನರನ್ನು ಬೇರ್ಪಡಿಸಿರುವುದು, ಮಹಿಳೆಯರ ಸ್ಥಿತಿ ದುರ್ಬಲವಾಗಿರುವುದು— ಇವುಗಳೆಲ್ಲ ಅವನ ಮನಸ್ಸನ್ನು ಕಾಡುತ್ತವೆ. ಈ ಸಂದರ್ಭದಲ್ಲೇ ಅವನು ಸಾಮಾಜಿಕ ಚಳವಳಿಯಲ್ಲಿ ಭಾಗವಹಿಸುತ್ತಾನೆ. ಶಿಕ್ಷಣದ ಮೂಲಕ ಜನರನ್ನು ಜಾಗೃತಿಗೊಳಿಸುವುದು, ಅಹಿಂಸಾತ್ಮಕ ಹೋರಾಟ ನಡೆಸುವುದು, ಶೋಷಿತರ ಪರವಾಗಿ ನಿಲ್ಲುವುದು ಅವನ ಧ್ಯೇಯವಾಗುತ್ತದೆ.

ಕಾದಂಬರಿಯಲ್ಲಿ ಅಹಿಂಸಾತ್ಮಕ ಹೋರಾಟದ ಮಹತ್ವವನ್ನು ವಿವರಿಸಲಾಗಿದೆ. ಹಿಂಸೆಯಿಂದ ಸಮಾಜ ಬದಲಾಗುವುದಿಲ್ಲ; ಪ್ರೀತಿ ಮತ್ತು ಸತ್ಯವೇ ನಿಜವಾದ ಬದಲಾವಣೆಗೆ ದಾರಿ ಮಾಡಿಕೊಡುತ್ತದೆ

ಎಂಬ ಸಂದೇಶ ನೀಡಲಾಗಿದೆ. ಹಿಂದೂ–ಮುಸ್ಲಿಂ ಏಕತೆಯ ಅಗತ್ಯವನ್ನು ಕಾದಂಬರಿ ಬಲವಾಗಿ ಹೇಳುತ್ತದೆ. ಧರ್ಮವು ಜನರನ್ನು ಬೇರ್ಪಡಿಸದೇ, ಒಗ್ಗೂಡಿಸಬೇಕು ಎಂಬ ಮೌಲ್ಯವನ್ನು ಪ್ರೇಮಚಂದ್ ವ್ಯಕ್ತಪಡಿಸಿದ್ದಾರೆ. ರೈತರ ಜೀವನದ ಕಷ್ಟಗಳು, ಸಾಲದ ಬಾಧೆ, ಶೋಷಣೆ—ಇವುಗಳನ್ನು ಕಾದಂಬರಿ ಸ್ಪಷ್ಟವಾಗಿ ಚಿತ್ರಿಸುತ್ತದೆ. ಗ್ರಾಮೀಣ ಭಾರತದ ನಿಜವಾದ ಚಿತ್ರಣ ಇಲ್ಲಿ ಕಾಣಬಹುದು. ಮಹಿಳೆಯರು ಕೇವಲ ಮನೆಯೊಳಗೆ ಸೀಮಿತವಾಗಿರಬಾರದು; ಅವರಿಗೆ ಶಿಕ್ಷಣ ಮತ್ತು ಸಮಾನ ಹಕ್ಕುಗಳ ಅಗತ್ಯವಿದೆ ಎಂಬ ವಿಚಾರವನ್ನು ಕೃತಿ ಒತ್ತಿಹೇಳುತ್ತದೆ. ಕಾದಂಬರಿಯಲ್ಲಿ ಭಾರತದ ಸ್ವಾತಂತ್ರ್ಯ ಚಳವಳಿಯ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ಬ್ರಿಟಿಷರ ಆಳ್ವಿಕೆಯ ಪರಿಣಾಮ, ಜನರ ಮೇಲಿನ ಒತ್ತಡ, ಮತ್ತು ದೇಶಭಕ್ತಿ—ಇವು ಕಥೆಯಲ್ಲೆಲ್ಲಾ ಹರಡಿಕೊಂಡಿವೆ. ಜನರಲ್ಲಿ ರಾಷ್ಟ್ರೀಯ ಚೇತನ ಮೂಡಿಸುವುದರಲ್ಲಿ ಶಿಕ್ಷಣ ಮತ್ತು ಸಂಘಟಿತ ಹೋರಾಟ ಮುಖ್ಯವೆಂದು ಲೇಖಕರು ಸೂಚಿಸುತ್ತಾರೆ.

ಕರ್ಮಭೂಮಿ ಕೇವಲ ಇತಿಹಾಸದ ಕೃತಿ ಅಲ್ಲ; ಅದು ಇಂದಿನ ಸಮಾಜಕ್ಕೂ ದಾರಿ ತೋರಿಸುವ ಗ್ರಂಥವಾಗಿದೆ. ಮಾನವೀಯತೆ, ಕರ್ತವ್ಯ, ಸಮಾಜಸೇವಾ ಮನೋಭಾವ ಮತ್ತು ರಾಷ್ಟ್ರೀಯ ಚೇತನವನ್ನು ಒಗ್ಗೂಡಿಸುವ ಶ್ರೇಷ್ಠ ಸಾಹಿತ್ಯಕೃತಿ. ವ್ಯಕ್ತಿಯ ಜೀವನವು ತನ್ನ ಸ್ವಾರ್ಥದ ಸುತ್ತ ಮಾತ್ರ ಸೀಮಿತವಾಗಿರಬಾರದು; ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡುವ "ಕರ್ಮಭೂಮಿ"ಯಾಗಿ ರೂಪುಗೊಳ್ಳಬೇಕು ಎಂಬ ಮಹತ್ವದ ಸಂದೇಶವನ್ನು ಈ ಕೃತಿ ಸಾರುತ್ತದೆ.

ಪ್ರೇಮಚಂದರ ಸಾಹಿತ್ಯದ ಮೂಲ ಉದ್ದೇಶ ಸಮಾಜ ಸುಧಾರಣೆ. ಅವರು ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಮಹಿಳಾ ಶೋಷಣೆ, ದಾರಿದ್ರ್ಯ, ಅಕ್ಷರಾಸಕ್ತಿ ಮತ್ತು ವಸಾಹತುಶಾಹಿ ವಿರುದ್ಧ ಧ್ವನಿ ಎತ್ತಿದರು. ಅವರ ದೃಷ್ಟಿಯಲ್ಲಿ ಸಾಹಿತ್ಯವು ಕೇವಲ ಮನರಂಜನೆಗಾಗಿ ಅಲ್ಲ, ಅದು ಜನರ ಬದುಕನ್ನು ಸುಧಾರಿಸುವ ಸಾಧನವಾಗಬೇಕು. ಅವರು ಗಾಂಧೀಜಿಯ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದರು. ಸತ್ಯ, ಅಹಿಂಸೆ, ಸರಳ ಜೀವನ ಮತ್ತು ಮಾನವೀಯತೆ ಅವರ ಸಾಹಿತ್ಯ ಕೇಂದ್ರದ ಮೌಲ್ಯಗಳಾಗಿವೆ.

ಪ್ರೇಮಚಂದರ ಭಾಷೆ ಅತ್ಯಂತ ಸರಳ ಮತ್ತು ಜನಸಾಮಾನ್ಯರಿಗೆ ಅರ್ಥವಾಗುವಂತದ್ದು. ಅಲಂಕಾರಿಕ ಭಾಷೆಯ ಬದಲು ನೈಜ ಮಾತಿನ ಶೈಲಿಯನ್ನು ಬಳಸುವರು. ಇದರಿಂದ ಅವರ ಕೃತಿಗಳು ಜನಮನಕ್ಕೆ ಹತ್ತಿರವಾದವು. ಗ್ರಾಮೀಣ ಪದಗಳು, ನುಡಿಗಟ್ಟುಗಳು ಅವರ ಸಾಹಿತ್ಯಕ್ಕೆ ಜೀವ ತುಂಬುತ್ತವೆ. ಅವರ ಕೃತಿಗಳು ಕನ್ನಡ ಸೇರಿದಂತೆ ಅನೇಕ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. ಕನ್ನಡ ಪ್ರಗತಿಶೀಲ ಸಾಹಿತ್ಯದ ಮೇಲೆ ಅವರ ಕೃತಿಗಳು ಪ್ರಭಾವ ಬೀರಿವೆ.

ಪ್ರೇಮಚಂದರು 1936ರ ಅಕ್ಟೋಬರ್ 8ರಂದು ನಿಧನರಾದರು. ಅವರ ಜೀವನ ಬಡತನದಲ್ಲೇ ಕಳೆದು ಹೋದರೂ, ಅವರು ಬಿಟ್ಟುಕೊಟ್ಟ ಸಾಹಿತ್ಯ ಸಂಪತ್ತು ಅಮೂಲ್ಯವಾಗಿದೆ. ಇಂದಿಗೂ ಅವರ ಕೃತಿಗಳು ಪ್ರಸ್ತುತವಾಗಿವೆ. ಅವರು ಸಾಹಿತ್ಯವನ್ನು ಸಮಾಜದ ಕನ್ನಡಿಯನ್ನಾಗಿ ಮಾಡಿದರು. ರೈತ, ಬಡವ, ಮಹಿಳೆ ಮತ್ತು ಶೋಷಿತ ವರ್ಗಗಳ ಧ್ವನಿಯಾಗಿ ಅವರು ಉಳಿದರು. ಅವರ ಕೃತಿಗಳು ಓದುಗರ ಹೃದಯವನ್ನು ತಟ್ಟುವಷ್ಟೇ ; ಸಮಾಜದ ಕುರಿತು ಚಿಂತನೆಗೆ ಪ್ರೇರೇಪಿಸುತ್ತವೆ. ಪ್ರೇಮಚಂದರ ಸಾಹಿತ್ಯವು ಕಾಲಾತೀತ. ಸಮಾಜದಲ್ಲಿ ಅಸಮಾನತೆ ಇರುವವರೆಗೂ ಅವರ ಕೃತಿಗಳ ಪ್ರಸ್ತುತತೆ ಎಂದಿಗೂ ಕಡಿಮೆಯಾಗದು. ಅವರು ಭಾರತೀಯ ಸಾಹಿತ್ಯದಲ್ಲಿ ಸದಾ ಕಾಲ ಬೆಳಗುವ ನಕ್ಷತ್ರವಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಅಮೃತ್ ರಾಯ್. *ಕಲಂ ಕಾ ಸಿಪಾಯಿ.* ಲೋಕಭಾರತಿ ಪ್ರಕಾಶನ.

- ಬುರ್ಲಿ ಬಿಂದುಮಾಧವ. (ಸಂ.) (1955). *ಪ್ರೇಮಚಂದ ದರ್ಶನ.* ಮಿಂಚಿನಬಳ್ಳಿ ಕಾರ್ಯಾಲಯ.
- ಕನ್ನಡ ವಿಕಿಪೀಡಿಯ – ಒಂದು ಮುಕ್ತ ವಿಶ್ವಕೋಶ
- ಮೈಥಲಿ ಪಿ. ರಾವ್., ಶಾಂತಕುಮಾರಿ. *ಹೊಸ ತಲೆಮಾರಿನ ಹಿಂದಿ ಕಥೆಗಳು.* ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ಪಾರ್ವತಿ, ಎಚ್. ಎಸ್. *ಪ್ರೇಮಚಂದ್.* ಸಪ್ನ ಬುಕ್ ಹೌಸ್.
- ಪ್ರಕಾಶ ಚಂದ್ರಗುಪ್ತ. *ಭಾರತೀಯ ಸಾಹಿತ್ಯ ನಿರ್ಮಾಪಕರು ಪ್ರೇಮಚಂದ.* (ಅನು, ಎಲ್. ಗುಂಡಪ್ಪ). ಕೇಂದ್ರ ಸಾಹಿತ್ಯ ಅಕಾಡೆಮಿ.
- ರಾಮವಿಲಾಸ ಶರ್ಮಾ. (1952). *ಪ್ರೇಮ್‌ಚಂದ ಔರ್ ಉನ್ಕಾ ಯುಗ್.* ರಾಜಕಮಲ್ ಪ್ರಕಾಶನ.
- ಶಿವರಾಣಿ ದೇವಿ. (1944). *ಪ್ರೇಮ್‌ಚಂದ ಘರ್ ಮೇ.* ರಾಧಾಕೃಷ್ಣ ಪ್ರಕಾಶನ.